# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 710 |
| ಸದಸ್ಯರ ಹೆಸರು | : | ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19-02-2018 |
| ಉತ್ತರಿಸುವ ಸಚಿವರು | : | ಮಾನ್ಯ ಮೀನುಗಾರಿಕೆ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು. |

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬಹಳ ಅನಾದಿಕಾಲದಿಂದಲೂ ಕೃಷಿ ಮನೋರಂಜನೆ ಕ್ರೀಡೆ; ದೈವಾರಾಧನ ಹಾಗೂ ಸಾಂಸ್ಕೃತಿಕ ಚಟುವಟಿಕೆಯಾಗಿ ಕಂಬಳಗಳನ್ನು ನಡೆಸಲಾಗುತ್ತಿದ್ದು, ಪ್ರಸ್ತುತ ಅವು ನಶಿಸಿಹೋಗುತ್ತಿರುವುದಕ್ಕೆ ಕಾರಣಗಳೇನು? | ಕಂಬಳ ಕ್ರೀಡೆಗೆ 700 – 1000 ವರ್ಷಗಳ ಸುದೀರ್ಘ ಇತಿಹಾಸವಿದ್ದು, ಈ ಕ್ರೀಡೆ ಕರಾವಳಿ ಭಾಗದ ಜನರ ಸಂಪ್ರದಾಯ, ಸಂಸ್ಕೃತಿಯೇ ಆಗಿಹೋಗಿದೆ. ಇದಕ್ಕಾಗಿಯೇ ಕೋಣಗಳನ್ನು ವಿಶೇಷವಾಗಿ ಸಾಕಿ ಅವುಗಳಿಗೆ ತರಬೇತಿ ನೀಡಲಾಗುತ್ತಿದ್ದು, ಹಿಂಸಾರಹಿತವಾಗಿ ಕೋಣಗಳನ್ನು ಕಂಬಳದಲ್ಲಿ ಬಳಸಲು ಕಾಲಕಾಲಕ್ಕೆ ಕಾನೂನಿನ ಚೌಕಟ್ಟಿನೊಳಗೆ (ಪ್ರಾಣಿ ಹಿಂಸಾ ತಡೆಗಟ್ಟುವ ಕಾಯ್ದೆ 1960 ರನ್ವಯ) ಸೂಚನೆ ನೀಡಲಾಗುತ್ತಿದೆ.<br><br>ದೈವಾರಾದನೆಯೇ ಪ್ರಮುಖ ವಿಷಯವಾಗಿ ಪ್ರತಿವರ್ಷ ನವೆಂಬರ್ 15 ರಿಂದ ಡಿಸೆಂಬರ್ 15ರ ಸಂಕ್ರಮಣದ 1 ತಿಂಗಳ ಅವಧಿಯಲ್ಲಿ ಸಮಾಜದ ಎಲ್ಲಾ ಸಮುದಾಯಗಳನ್ನು ಒಳಗೊಂಡು ಸಾಂಪ್ರದಾಯಿಕ ಕಂಬಳವನ್ನು ನಡೆಸಿ ರೈತರ 2ನೇ ಬೆಳೆಗೆ ಪ್ರಾಧಾನ್ಯತೆ ಕೊಡುವಾಗ ದೇವರಲ್ಲಿ ಪ್ರಾರ್ಥನೆ ಸಲ್ಲಿಸುವ ವಿಧಿ ವಿಧಾನಗಳೊಂದಿಗೆ ವಿಶಾಲವಾದ ಗದ್ದೆಯಲ್ಲಿ ಯಾವುದೆ ಕರೆ (track) ಗಳಿಲ್ಲದೆ ನಡೆಸಲಾಗುತ್ತಿದೆ. ಈ ಸಂದರ್ಭ ರೈತರು ತಾವು ಬೆಳೆಸುವ ಬೆಳೆಗೆ ವಿಘ್ನಗಳು ಬಾರದಂತೆ, ಅತಿಹೆಚ್ಚು ಇಳುವರಿ ಬರುವಂತೆ ದೇವರಲ್ಲಿ ಪ್ರಾರ್ಥಿಸುತ್ತಾರೆ ಎಂಬುದು ಪ್ರತೀತಿ.<br><br>ದೇವರ ಆಚರಣೆಯಲ್ಲಿ ಸಂಬಂಧಪಟ್ಟ ಹಿರಿಯ ವ್ಯಕ್ತಿಯ ನೇತೃತ್ವದಲ್ಲಿ ಸಾಂಪ್ರದಾಯಿಕ ಕಂಬಳ ನಡೆಸಲಾಗುತ್ತದೆ. ಪ್ರತಿ ಸಮುದಾಯದಿಂದ ಕೋಣಗಳನ್ನು ಸಿಂಗರಿಸುವ / ಓಡಿಸುವ / ಹಿಡಿಯುವ / ನೀರು ಪೂರೈಕೆ ಮಾಡುವ ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ಕಂಬಳದ ಸಂದರ್ಭದಲ್ಲಿ ಪ್ರಾಧಾನ್ಯತೆ ನೀಡಲಾಗುತ್ತದೆ.<br><br>ಅನಾದಿ ಕಾಲದಿಂದಲೂ ಕಂಬಳ ಜರುಗಿಸಿರುವ ಬಗ್ಗೆ ಉಲ್ಲೇಖಗಳಿವೆ. ಹೀಗಾಗಿ ಸಾಂಪ್ರದಾಯಿಕ ಕಂಬಳಗಳು ದೈವಾರಾದನೆಯ ಮುಖ್ಯ ವಿಷಯವಾಗಿಟ್ಟುಕೊಂಡು ನಿರಂತರವಾಗಿ ನಡೆಯಬೇಕಾಗಿರುವುದಾಗಿ ಸ್ಥಳೀಯ ಕೃಷಿಕರ ಆಶಯವಾಗಿದ್ದು ಸಂಪ್ರದಾಯದಂತೆ ನಡೆಸಬೇಕಿರುತ್ತದೆ ಎಂಬುದು ಪ್ರತೀತಿ. |
| | | ಇತ್ತೀಚಿನ ದಿನಗಳಲ್ಲಿ ದಿನಗೂಲಿ ಕಾರ್ಮಿಕರ ಕೊರತೆಯಿಂದಾಗಿ ಜಿಲ್ಲೆಯ ಹಲವು ಭಾಗಗಳಲ್ಲಿ ಯಾಂತ್ರೀಕರಣದ ಮೂಲಕ ಭತ್ತ ಬೇಸಾಯ ನಡೆಸುತ್ತಿದ್ದು, ಕೋಣಗಳ/ ಉಳುಮೆ ಹೋರಿಗಳ ಸಂಖ್ಯೆಯು ಕಡಿಮೆಯಾಗುತ್ತಿದೆ. ಆದ್ದರಿಂದ ಬೇಸಾಯಕ್ಕೆ / ಕಂಬಳಕ್ಕೆ ಉಪಯೋಗಿಸಲ್ಪಡುವ ಕೋಣಗಳ ಸಂಖ್ಯೆ ಸ್ವಾಭಾವಿಕವಾಗಿ ಕಡಿಮೆಯಾಗುತ್ತಿದ್ದರೂ ಸಹ ಕಂಬಳ ಆಚರಣೆಗಾಗಿ ಹರಕೆ ಹಾಗೂ ಗ್ರಾಮೀಣ ಮನೋರಂಜನೆಗಾಗಿ ದೈವಾರಾದನೆಗೆ ಪೂರಕವಾಗಿ ಕೋಣಗಳನ್ನು ಪೋಷಿಸಲಾಗುತ್ತಿದೆ.<br><br>ಇದಲ್ಲದೆ ಗ್ರಾಮೀಣ ಭಾಗಗಳಲ್ಲಿ ಸ್ಪರ್ಧಾತ್ಮಕವಾಗಿ ಕೋಣಗಳ ಕಂಬಳಗಳನ್ನು ನಿರ್ದಿಷ್ಟ ಗ್ರಾಮಗಳಲ್ಲಿ ಜೋಡುಕರೆ ಕಂಬಳದ ಹೆಸರಿನಲ್ಲಿ ಆಯೋಜಿಸಲಾಗುತ್ತಿದೆ. ಈ ಕಂಬಳಗಳನ್ನು ನಡೆಸುವಾಗ ಕಾನೂನಿನ ಚೌಕಟ್ಟಿನೊಳಗೆ ನಡೆಸಲು ಅನುಮತಿ ನೀಡಲಾಗುತ್ತಿದೆ. |

| | | |
|---|---|---|
| | | ಕಂಬಳದ ಬಗ್ಗೆ ವಿವಿಧ ಪ್ರಾಣಿ ಕಲ್ಯಾಣ ಸ್ವಯಂಸೇವಾ ಸಂಸ್ಥೆಗಳು ನ್ಯಾಯಾಲಯದಲ್ಲಿ ದಾವೆಗಳನ್ನು ಹೂಡಿದ್ದು, ಪ್ರಸ್ತುತ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ. ಆದಾಗ್ಯೂ ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲಿ ಈ ಕ್ರೀಡೆ ನಶಿಸಿ ಹೋಗಿರುವುದಿಲ್ಲ. |
| ಆ | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರತಿ ವರ್ಷ ನಡೆಯುವ ಕಂಬಳಗಳ ಸಂಖ್ಯೆ ಎಷ್ಟು; ಅವು ಯಾವುವು; [ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು]; | ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರತಿ ವರ್ಷ ನಡೆಯು ಕಂಬಳಗಳ ಸಂಖ್ಯೆ ಈ ಕೆಳಕಂಡಂತಿವೆ. |

ಉಡುಪಿ ಜಿಲ್ಲೆಯಲ್ಲಿ ಪ್ರತಿ ವರ್ಷ ನಡೆಯುವ ಕಂಬಳಗಳ ವಿವರ

| ಕ್ರ. ಸಂ. | ತಾಲ್ಲೂಕು | ಕಂಬಳ ನಡೆಯುವ ಸ್ಥಳ |
|---|---|---|
| ಸಾಂಪ್ರದಾಯಿಕ ಕಂಬಳ | | |
| 1 | ಉಡುಪಿ | ವಂಡಾರು |
| 2 | | ಚೇರ್ಕಾಡಿ |
| 3 | | ಪೇರಂಜೆ |
| 4 | | ಯಡ್ತಾಡಿ |
| 5 | | ಬಾರ್ಕೂರು |
| 6 | | ಹಂದಾಡಿ |
| 7 | | ನಡೂರು |
| 8 | | ಮುದ್ದುಮನೆ |
| 9 | | ಮಣೂರು |
| 10 | | ಬನ್ನಾಡಿ |
| 11 | | ಪೋನ್ಸ |
| 12 | | ಕೊಡವೂರು – ಕಂಬಳಕಟ್ಟ |
| 13 | | ಪೆರ್ಣಂಕಿಲ |
| 14 | | ಆತ್ರಾಡಿ |
| 15 | | ಪರೀಕ |
| 16 | | ಕಟಪಾಡಿ |
| 17 | | ಶಿರ್ವ ಕೋಡು |
| 18 | | ಶಿರ್ವ ನಡಿಗುತ್ತು |
| 19 | | ಬೆಟ್ಲಾಡಿ |
| 20 | | ಓರ್ವಾಡಿ |
| 21 | | ಕಂಜೂರು |
| 22 | | ಬೈದಬೆಟ್ಟು |
| 23 | | ಹೊರ್ಲಾಳಿ |
| 24 | | ಬಿಲ್ಲಾಡಿ |
| 25 | | ಓರೇಬೆಟ್ಟು |
| 26 | ಕುಂದಾಪುರ | ಮೊಳಹಳ್ಳಿ |
| 27 | | ಗುಲ್ವಾಡಿ |
| 28 | | ನಾವುಂದ |
| 29 | | ಕೊರ್ಗಿ |
| 30 | | ಮೂಡ್ಲಕಟ್ಟೆ |
| 31 | | ತಲ್ಲೂರು |
| 32 | | ತಗ್ಗರ್ಸೆ |
| 33 | | ಸಿದ್ದಾಪುರ – ಕಡ್ರಿ |
| 34 | ಕಾರ್ಕಳ | ತನ್ನಸೆ – ಕುಚ್ಚೂರು |
| 35 | | ನಿಂಜೂರು |

**ಜೋಡುಕರೆ ಕಂಬಳಗಳು**

| | | |
|---|---|---|
| 1 | ಉಡುಪಿ | ಅಡ್ವೆ – ನಂದಿಕೂರು |
| 2 | | ಅಲ್ತಾರು |
| 3 | | ಕಟಪಾಡಿ ಬೀಡು |
| 4 | ಕಾರ್ಕಳ | ಬಾರಾಡಿಬೀಡು |
| 5 | | ಮಿಯ್ಯಾರು |
| 6 | | ಈದು |

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುವ ಕಂಬಳಗಳ ವಿವರ**

| ಕ್ರ ಸಂ | ತಾಲ್ಲೂಕು | ಕಂಬಳಗಳ ಸಂಖ್ಯೆ | ಕಂಬಳ ಜರುಗುವ ಸ್ಥಳ | ಗ್ರಾಮ |
|---|---|---|---|---|
| 1 | ಬಂಟ್ವಾಳ | 2 | ಕಕ್ಕೆಪದವು | ಕಕ್ಕೆಪದವು ಗ್ರಾಮ |
| | | | ಹೊಕ್ಕಾಡಿಗೋಳಿ | ಎಲ್ಯನಡು ಗೋಡುಗ್ರಾಮ |
| 2 | ಬೆಳ್ತಂಗಡಿ | 2 | ಬಂಗಾಡಿಕೊಲ್ಲಿ – ಸೂರ್ಯ ಚಂದ್ರ | ಮಿತ್ತಬಾಗಿಲು |
| | | | ವೇಣೂರು ಪೆರ್ಮುಡ– ಸೂರ್ಯ ಚಂದ್ರ | ವೇಣೂರು |
| 3 | ಮಂಗಳೂರು | 9 | ಮೂಡಬಿದ್ರೆ, – ಕೋಟಿಚೆನ್ನಯ | |
| | | | ಪಿಲಿಕುಲ | |
| | | | ಕೊಟ್ಟಾರ | |
| | | | ಮುಲ್ಕಿ – ಅರಸುಕಂಬಳ | ಪಡುಪಣಂಬೂರು |
| | | | ಸುರತ್ಕಲ್ – ರಾಮ–ಲಕ್ಷ್ಮಣ | ಮಾಧವನಗರ |
| | | | ಐಕಳಬಾವ | |
| | | | ಜಪ್ಪಿನಮೊಗರು | |
| | | | ವಾಮಂಜೂರು | |
| | | | ತಲಪಾಡಿ | |
| 4 | ಪುತ್ತೂರು | 2 | ಉಪ್ಪಿನಂಗಡಿ – ವಿಜಯ ವಿಕ್ರಮ | ಉಪ್ಪಿನಂಗಡಿ |
| | | | ಪುತ್ತೂರು – ಕೋಟಿಚೆನ್ನಯ | ಪುತ್ತೂರು |
| 5 | ಸುಳ್ಯ | – | – | – |
| – | ಒಟ್ಟು | 15 | | |

ಇ) ಕಂಬಳಗಳನ್ನು ನಡೆಸಲು ಈವರೆಗೆ ಸರ್ಕಾರದಿಂದ ಪ್ರೋತ್ಸಾಹ ಧನ ಅಥವಾ ಅನುದಾನ ಬಿಡುಗಡೆ ಮಾಡಲಾಗಿದೆಯೇ; (ವರ್ಷವಾರು ವಿವರ ನೀಡುವುದು);

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಕಂಬಳವನ್ನು ನಡೆಸಲು ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

| ಕ್ರಸಂ | ವರ್ಷ | ಕಾರ್ಯಕ್ರಮದ ಹೆಸರು | ಮೊತ್ತ |
|---|---|---|---|
| 01 | 2015–16 | ಮುಲ್ಕಿ ಸೀಮೆ ಅರಸು ಕಂಬಳ | ರೂ.1.00 ಲಕ್ಷ |
| 02 | 2016–17 | ಕೋಟಿ ಚೆನ್ನಯ್ಯ ಕಂಬಳ | ರೂ.2.00 ಲಕ್ಷ |
| 03 | 2017–18 | ಕೋಟಿ ಚೆನ್ನಯ್ಯ ಜೋಡುಕರೆ ಕಂಬಳ | ರೂ.10.00 ಲಕ್ಷ |

| | | |
|---|---|---|
| ಈ | ಈ ಹಿಂದಿನ ಸರ್ಕಾರವು ಕಂಬಳಗಳಿಗೆ ಅನುದಾನ ಅಥವಾ ಪ್ರೋತ್ಸಾಹ ಧನ ನೀಡಿರುವುದು ನಿಜವೇ; ನೀಡಿದ್ದಲ್ಲಿ ವಿವರ ನೀಡುವುದು; | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಪ್ರೋತ್ಸಾಹ ಧನ ನೀಡಿರುವುದಿಲ್ಲ. |
| ಉ | ಕಂಬಳಗಳಿಗೆ ಪ್ರೋತ್ಸಾಹ ಧನ ಅನುದಾನ ನೀಡುವ ಬಗ್ಗೆ ಯೋಜನೆ ರೂಪಿಸಲು ಸರ್ಕಾರ ಚಿಂತನೆ ಹೊಂದಿದೆಯೇ? ಇಲ್ಲವಾದಲ್ಲಿ, ಕಾರಣವೇನು? | ಕಂಬಳಗಳಿಗೆ ಪ್ರೋತ್ಸಾಹ ಧನ, ಅನುದಾನ ನೀಡುವ ಬಗ್ಗೆ ಯೋಜನೆ ರೂಪಿಸುವ ಬಗ್ಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಯಾವುದೇ ಯೋಜನೆ ಇರುವುದಿಲ್ಲ. |

ಸಂಖ್ಯೆ: ಯುಸೇಇ 21 ಯುಸೇಭಾ 2018

(ಪ್ರಮೋದ್ ಮಧ್ವರಾಜ್)
ಮೀನುಗಾರಿಕೆ, ಯುವ ಸಬಲೀಕರಣ
ಹಾಗೂ ಕ್ರೀಡಾ ಸಚಿವರು.